# ಅಗಲಿದ ಪ್ರಮುಖರು

## ಸ್ಫುರದ್ರೂಪಿ ನಟನ ಯುಗಾಂತ್ಯ



ಹಿಂದಿ ಚಿತ್ರರಂಗದಲ್ಲಿ 'ಹೀ ಮ್ಯಾನ್' ಎಂದು ಖ್ಯಾತರಾಗಿದ್ದ, ಸ್ಫುರದ್ರೂಪಿ ನಟ ಧರ್ಮೇಂದ್ರ ಅವರು ನವೆಂಬರ್ 24ರಂದು ತಮ್ಮ 89ನೇ ವಯಸ್ಸಿನಲ್ಲಿ ವಿಧಿವಶರಾದರು. ಆರು ದಶಕಗಳ ಸಿನಿ ಪಯಣದಲ್ಲಿ 250ಕ್ಕೂ ಹೆಚ್ಚು ಚಿತ್ರಗಳಲ್ಲಿ ತಮ್ಮ ನಟನಾ ಕೌಶಲವನ್ನು ಪ್ರದರ್ಶಿಸಿದ್ದ ಅವರು ರಾಜಕಾರಣಿಯಾಗಿಯೂ ಗುರುತಿಸಿಕೊಂಡವರು. ಕೊನೆಯ ದಿನಗಳಲ್ಲಿ ಅನಾರೋಗ್ಯ ಅವರನ್ನು ಕಾಡಿತ್ತು.

- ಕೇರಳದ ಮಾಜಿ ಮುಖ್ಯಮಂತ್ರಿ, ಸಿಪಿಎಂನ ಹಿರಿಯ ನಾಯಕ ವಿ.ಎಸ್. ಅಚ್ಯುತಾನಂದನ್ (101 ವರ್ಷ), ಜುಲೈ 21
- ಕೇಂದ್ರ ಸರ್ಕಾರದ ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ಶಿವರಾಜ್ ಪಾಟೀಲ್ (90), ಡಿಸೆಂಬರ್ 12
- ಬಿಜೆಪಿ ಮುಖಂಡ, ಗುಜರಾತ್‌ನ ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿ (68), ಜೂನ್ 12
- ಜಾರ್ಖಂಡ್‌ನ ಮುಖ್ಯಮಂತ್ರಿ, ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ರಾಜಕೀಯ ಪಕ್ಷದ ಸಂಸ್ಥಾಪಕ ಶಿಬು ಸೊರೇನ್ (81), ಆಗಸ್ಟ್ 4
- ಜಮ್ಮು ಮತ್ತು ಕಾಶ್ಮೀರ, ಗೋವಾ ಮತ್ತು ಮೇಘಾಲಯದ ರಾಜ್ಯಪಾಲರಾಗಿದ್ದ ಸತ್ಯಪಾಲ್ ಮಲಿಕ್ (79), ಆಗಸ್ಟ್ 5
- ಮಹಾಭಾರತ ಪೌರಾಣಿಕ ಧಾರಾವಾಹಿಯಲ್ಲಿ ಕರ್ಣನ ಪಾತ್ರ ನಿರ್ವಹಿಸಿದ್ದ ನಟ ಪಂಕಜ್ ಧೀರ್ (68), ಅಕ್ಟೋಬರ್ 15.



ವಿ.ಎಸ್. ಅಚ್ಯುತಾನಂದನ್



ಶಿಬು ಸೊರೇನ್

# ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲೊಂದು ಸುತ್ತು...




ಶುಭಾಂಶು ಶುಕ್ಲಾ

**ಭೂಮಿ ಆಕಾಶದಲ್ಲೂ ವಿಜ್ಞಾನ ದಾಪುಗಾಲಿಟ್ಟ ವರ್ಷ 2025. ಸುನಿತಾ ವಿಲಿಯಮ್ಸ್ ಸುರಕ್ಷಿತವಾಗಿ ಧರೆಗೆ ಬಂದರು. ಶುಭಾಂಶು ಶುಕ್ಲಾ ಬಾಹ್ಯಾಕಾಶಕ್ಕೆ ಹೋಗಿ ಬಂದರು. ಕೃತಕ ಬುದ್ಧಿಮತ್ತೆಯನ್ನೇ ವಿಜ್ಞಾನಿಗಳು ಇನ್ನಷ್ಟು ಚುರುಕುಗೊಳಿಸಿದ ವರ್ಷವೂ ಇದು.**

■ ಇ.ಎಸ್. ಸುಧೀಂದ್ರ ಪ್ರಸಾದ್



ಜೇಮ್ಸ್ ವೆಬ್ ಬಾಹ್ಯಾಕಾಶ ದೂರದರ್ಶಕ

ಬಾಹ್ಯಾಕಾಶಕ್ಕೆ ಭಾರತದ ಲಗ್ಗೆ, ಕೃತಕ ಬುದ್ಧಿಮತ್ತೆಯ ದಾಪುಗಾಲು, ಡಿಎನ್‌ಎ ದುರಸ್ತಿಗೊಳಿಸಿ ಗಂಭೀರ ಸ್ವರೂಪದ ಕಾಯಿಲೆಗಳನ್ನೇ ಇಲ್ಲವೆಂದೆನಿಸುವ ತಂತ್ರಜ್ಞಾನ. ಕ್ವಾಂಟಮ್ ವಿಜ್ಞಾನ ವರ್ಷ ಹೀಗೆ ಹತ್ತಾರು ವೈಜ್ಞಾನಿಕ ಆವಿಷ್ಕಾರಗಳು 2025ರಲ್ಲಿ ನಡೆದವು.

ಭಾರತೀಯ ಮೂಲದ ಸುನೀತಾ ವಿಲಿಯಮ್ಸ್ ಹಾಗೂ ಬುಚ್ ವಿಲ್‌ಮೋರ್ ಅವರು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ ಬರೊಬ್ಬರಿ 286 ದಿನಗಳ ನಂತರ ಮಾರ್ಚ್ 18ರಂದು ಧರೆಗೆ